# OS.No. 206/2019

**<u>ಮಧ್ಯಂತರ ಅರ್ಜಿ ಸಂಖ್ಯೆ.15 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ 151 ರಡಿ ಅರ್ಜಿ</u>**

ಅರ್ಜಿದಾರರು ಈ ಮೇಲ್ಕಂಡ ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಕಾರಣಗಳಿಂದಾಗಿ ಅರ್ಜಿದಾರರು/ವಾದಿಯು ಸದರಿ ದಾವೆಯಲ್ಲಿ ಅರ್ಜಿಯಲ್ಲಿ ತಿಳಿಸಿರುವಂತೆ ವಾದ ಪತ್ರದಲ್ಲಿ ತಿದ್ದುಪಡಿ ಮಾಡಲು ಅನುಮತಿಯನ್ನು ನೀಡಬೇಕೆಂದು ಕೇಳಿಕೊಂಡಿತ್ತಾರೆ.

2. ಅರ್ಜಿದಾರರು ತಮ್ಮ ಪ್ರಮಾಣ ಪತ್ರದಲ್ಲಿ ಸದರಿ ದಾವೆಯನ್ನು ಪ್ರತಿವಾದಿಯ ವಿರುದ್ದ ಸ್ವತ್ತುಗಳ ವಿಭಜನೆ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ತಾವು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಸದರಿ ಸ್ವತ್ತುಗಳ ಬಗ್ಗೆ ತನಗೆ ಸರಿಯಾದ ಮಾಹಿತಿಯು ಸಿಕ್ಕದ ಕಾರಣ ತಾನು ಸದರಿ ದಾವೆಗೆ ಸದರಿ ಸ್ವತ್ತುಗಳನ್ನು ಸೇರಿಸಿರಲಿಲ್ಲ. ಆದರೆ ತನಗೆ ಸದರಿ ಸ್ವತ್ತುಗಳ ಮಾಹಿತಿ ಮತ್ತು ದಾಖಲಾತಿಗಳು ಸಿಕ್ಕಿರುವುದರಿಂದ ಮತ್ತು ಸದರಿ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು, ತಾನು ಸದರಿ

ಸ್ವತ್ತುಗಳನ್ನು ಸಹಾ ಸೇರಿಸಲು ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಪುರಸ್ಕರಿಸಿದರೆ ದಾವೆಯ ಸ್ವರೂಪ ಮತ್ತು ವ್ಯಾಜ್ಯ ಕಾರಣಗಳು ಬದಲಾಗುವುದಿಲ್ಲ ಮತ್ತು ಸದರಿ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗಳಿಗೆ ಯಾವುದೇ ರೀತಿಯ ತೊಂದರೆ ಯುಂಟಾಗುವುದಿಲ್ಲ ಒಂದು ವೇಳೆ ತಿರಸ್ಕರಿಸಿದರಲ್ಲಿ ಅರ್ಜಿದಾರರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆಂದು ನಮೂದಿಸಿರುತ್ತಾರೆ. ಆದ್ದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

3. ಪ್ರತಿವಾದಿರವರು ಸದರಿ ಮೇಲ್ಕಂಡ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ ವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿಯು ಮೇಲುನೋಟಕ್ಕೆ ಊರ್ಜಿತವಾಗತಕ್ಕದ್ದಲ್ಲ ಹಾಗೂ ವಜಾ ಆಗತಕ್ಕದ್ದಾಗಿರುತ್ತದೆ. ಮುಂದುವರೆದು, ವಾದಿಗಳು ಉದ್ದೇಶಿತ ದಾವಾ ಅನುಸೂಚಿ ತಿದ್ದುಪಡಿ ಮಾಡಲು ಬರುವುದಿಲ್ಲ. ಏಕೆಂದರೆ ಉದ್ದೇಶಿತ ದಾವಾ ಅನುಸೂಚಿ ತಿದ್ದುಪಡಿ ಆಸ್ತಿಯು ಪ್ರತಿವಾದಿಗೆ ಸೇರಿದಂತ ಸ್ವಯಾರ್ಜಿತದ ಆಸ್ತಿಯಾಗಿದ್ದು, ಆ ಆಸ್ತಿಯನ್ನು ಪ್ರತಿವಾದಿಯು ನಡೆಸುತ್ತಿರುವ ಸ್ವಂತ ಔಷಧಿ ಅಂಗಡಿ ಅಶೋಕ್ ಮೇಡಿಕಲ್ ಸ್ಟೋರ್‌ನಿಂದ ಬಂದಂತ ವರಮಾನದಿಂದ ಖರೀದ ಮಾಡಿದಂತ ಸ್ವಯಾರ್ಜಿತದ ಆಸ್ತಿಯಾಗಿರುತ್ತದೆ. ಪ್ರತಿವಾದಿ ಮೇಲ್ಕಂಡ ಔಷಧಿ ಅಂಗಡಿಯನ್ನು ಸುಮಾರು 1988 ನೇ ಇಸವಿಯಿಂದ ನಡೆಸುತ್ತಿರುತ್ತಾರೆ. ಮುಂದುವರೆದು, ಮೇಲೆ ಹೇಳಿದಂತೆ ಉದ್ದೇಶಿತ ದಾವಾ ಅನುಸೂಚಿ ತಿದ್ದುಪಡಿ ಆಸ್ತಿ, ಪ್ರತಿವಾದಿಗೆ ಸೇರಿದಂತೆ ಪ್ರತ್ಯೇಕವಾದ ಸ್ವಯಾರ್ಜಿತದ ಆಸ್ತಿಯಾಗಿರುತ್ತದೆ. ಆ ಆಸ್ತಿಗೂ ವಾದಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ. ವಾದಿಗಳು ಕೇಳಿರುವ ತಿದ್ದುಪಡಿಗೆ ಅನುಮತಿ ಕೊಟ್ಟಲ್ಲಿ ಸಂಪೂರ್ಣ ದಾವೆಯೇ ಬದಲಾವಣೆಯಾಗುತ್ತದೆ ಹಾಗೂ ದಾವೆಯ ವಸ್ತುಸ್ಥಿತಿಯೇ ಬದಲಾವಣೆ ಆಗುತ್ತದೆ ಹಾಗೂ ಹೊಸ ದಾವೆಯಾಗಿ ರೂಪುಗೊಳ್ಳುತ್ತದೆ. ಸದರಿ ಅರ್ಜಿಯನ್ನು ಪುರಸ್ಕರಿಸಿದರೆ ದಾವೆಯ ಸ್ವರೂಪ ಮತ್ತು ವ್ಯಾಜ್ಯ ಕಾರಣಗಳು ಬದಲಾಗುವುದಿಲ್ಲ ಸದರಿ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆಂದು ಮತ್ತು ಸದರಿ ಅರ್ಜಿಯನ್ನು

ತಿರಸ್ಕರಿಸಿದರೆ ಅರ್ಜಿದಾರರಿಗೆ ಯಾವುದೇ ರೀತಿಯ ತೊಂದರೆ ಯುಂಟಾಗುವುದಿಲ್ಲ ಆದ್ದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

4. ವಾದಿ ಮತ್ತು ಪ್ರತಿವಾದಿಗಳ ವಾದ ಮತ್ತು ತಕರಾರರನ್ನು ಕೇಳಲಾಯಿತು.

5. ಅರ್ಜಿದಾರರು ಸದರಿ ದಾವೆಯನ್ನು ಪ್ರತಿವಾದಿಯ ವಿರುದ್ಧ ಸ್ವತ್ತುಗಳ ವಿಭಜನೆ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ತಾವು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಸದರಿ ಸ್ವತ್ತುಗಳ ಬಗ್ಗೆ ತನಗೆ ಸರಿಯಾದ ಮಾಹಿತಿಯು ಸಿಕ್ಕದ ಕಾರಣ ತಾನು ಸದರಿ ದಾವೆಗೆ ಸದರಿ ಸ್ವತ್ತುಗಳನ್ನು ಸೇರಿಸಿರಲಿಲ್ಲ. ಆದರೆ ತನಗೆ ಸದರಿ ಸ್ವತ್ತುಗಳ ಮಾಹಿತಿ ಮತ್ತು ದಾಖಲಾತಿಗಳು ಸಿಕ್ಕಿರುವುದರಿಂದ ಮತ್ತು ಸದರಿ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು, ತಾನು ಸದರಿ ಸ್ವತ್ತುಗಳನ್ನು ಸಹಾ ಸೇರಿಸಲು ಅರ್ಜಿಯನ್ನು ಸಲ್ಲಿಸಿರುತ್ತೇನೆಂದು ನಮೂದು ಮಾಡಿದ್ದು, ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ. ಸದರಿ ಅರ್ಜಿಗೆ ಪ್ರತಿವಾದಿಯು ತಮ್ಮ ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ ವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿಯು ಮೇಲುನೋಟಕ್ಕೆ ಊರ್ಜಿತವಾಗತಕ್ಕದ್ದಲ್ಲ ಹಾಗೂ ವಜಾ ಆಗತಕ್ಕದ್ದಾಗಿರುತ್ತದೆ. ಮುಂದುವರೆದು, ವಾದಿಗಳು ಉದ್ದೇಶಿತ ದಾವಾ ಅನುಸೂಚಿ ತಿದ್ದುಪಡಿ ಮಾಡಲು ಬರುವುದಿಲ್ಲ. ಏಕೆಂದರೆ ಉದ್ದೇಶಿತ ದಾವಾ ಅನುಸೂಚಿ ತಿದ್ದುಪಡಿ ಆಸ್ತಿಯು ಪ್ರತಿವಾದಿಗೆ ಸೇರಿದಂತ ಸ್ವಯಾರ್ಜಿತದ ಆಸ್ತಿಯಾಗಿದ್ದು, ಸದರಿ ಆಸ್ತಿಗೂ ವಾದಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ. ವಾದಿಗಳು ಕೇಳಿರುವ ತಿದ್ದುಪಡಿಗೆ ಅನುಮತಿ ಕೊಟ್ಟಲ್ಲಿ ಸಂಪೂರ್ಣ ದಾವೆಯೇ ಬದಲಾವಣೆಯಾಗುತ್ತದೆ ಹಾಗೂ ದಾವೆಯ ವಸ್ತುಸ್ಥಿತಿಯೇ ಬದಲಾವಣೆ ಆಗುತ್ತದೆ ಹಾಗೂ ಹೊಸ ದಾವೆಯಾಗಿ

ರೂಪುಗೊಳ್ಳುತ್ತದೆ. ಆದ್ದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

6. ಅರ್ಜಿಯ ಜೊತೆಗಿನ ದಾಖಲೆಗಳು ಮತ್ತು ಪ್ರಮಾಣ ಪತ್ರ ಮತ್ತು ಪ್ರತಿವಾದಿ ಸಲ್ಲಿಸಿದ ಆಕ್ಷೇಪಣೆಯನ್ನು ಪರಿಶೀಲಿಸಲಾಗಿದೆ. ಪ್ರಸುತ್ತ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಸ್ವತ್ತುಗಳ ವಿಭಜನೆ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ಸಲ್ಲಿಸಿದ್ದು, ಅರ್ಜಿದಾರರು ಪ್ರಸ್ತಾವಿತ ತಿದ್ದುಪಡಿ ಅರ್ಜಿಯನ್ನು ವಾದ ಪತ್ರದಲ್ಲಿ ಐಟಂ ನಂ.8 ಮತ್ತು 9 ನ್ನು ಷೆಡ್ಯೂಲ್ ಸ್ವತ್ತುಗಳಾಗಿ ಸೇರಿಸಲು ಉದ್ದೇಶಿಸಿದ್ದು, ಸದಿರಿ ಅರ್ಜಿಯನ್ನು ಹೂಡಲಾಗಿರುತ್ತದೆ. ಈಗ ಪ್ರಸುತ್ತ ದಾವೆಯ ವಾದಿಯವರ ಸಾಕ್ಷಿಯ ವಿಚಾರಣೆಗೆ ಇದ್ದು, ಈ ಹಂತದಲ್ಲಿ ಪ್ರಸುತ್ತ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ. ವಾದಿಯೆ ನ್ಯಾಯಾಲಯದ ಮುಂದೆ ಭಾಗ ಕೇಳಿ ಬಂದಿರುವುದರಿಂದ ಮತ್ತು ಪ್ರಸುತ್ತ ಐಟಂ ನಂ.8 ಮತ್ತು 9 ನ್ನು ಷೆಡ್ಯೂಲ್ ಸ್ವತ್ತುಗಳಲ್ಲಿ ವಾದಿಗೆ ಭಾಗದ ಹಕ್ಕು ಇದ್ದಲ್ಲಿ ಅದನ್ನು ರುಜುವಾತುಪಡಿಸುವ ಹೊಣೆ ವಾದಿಯದೇ ಆಗಿರುತ್ತದೆ. ಆಗಿರುವಲ್ಲಿ ಸದರಿ ಅರ್ಜಿಯನ್ನು ಪುರಸ್ಕರಿಸದಿದ್ದರೆ ವಾದಿಗೆ ಐಟಂ ನಂ.8 ಮತ್ತು 9 ರಲ್ಲಿ ಇರುವ ತನ್ನ ಹಕ್ಕನ್ನು ಮೋಟಕುಗೊಳಿಸಿದಂತಹಗುತ್ತದೆ ಮತ್ತು ಪ್ರಸ್ತಾವಿತ ತಿದ್ದುಪಡಿಯು ದಾವೆಯ ಸ್ವರೂಪವನ್ನು ಅಥವಾ ಕ್ರಮದ ಕಾರಣವನ್ನು ಬದಲಾಯಿಸುವುದಿಲ್ಲ ಎಂಬ ಅಂಶವು ನ್ಯಾಯಾಲಯಕ್ಕೆ ಕಂಡುಬಂದಿದ್ದು, ಅರ್ಜಿಯನ್ನು ಅನುಮತಿಸಲು ಅರ್ಹವಾಗಿರುವುದರಿಂದ ಈ ಕೆಳಗಿನಂತೆಃ

## ಆದೇಶ

ಅರ್ಜಿದಾರರು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ.III ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ.151 ರಡಿ ತಿದ್ದುಪಡಿಯನ್ನು ಈ ಮೂಲಕ ಅನುಮತಿಸಲಾಗಿದೆ.

ವಾದಿಗೆ/ಅರ್ಜಿದಾರರಿಗೆ ತಿದ್ದುಪಡಿಯನ್ನು ಕೈಗೊಳ್ಳಲು ಮತ್ತು ತಿದ್ದುಪಡಿ ಮಾಡಿದ ಅರ್ಜಿಯನ್ನು ಸಲ್ಲಿಸಲು ನಿರ್ದೇಶಿಸಲಾಗಿದೆ.

**1** ನೇ ಅಪರ ಹಿರಿಯ ಸಿವಿಲ್ ಮತ್ತು ಜೆಎಂಎಫ್ ಸಿ ನ್ಯಾಯಾಧೀಶರು**,**
ರಾಮನಗರ**.**